**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.52/2022**

ಪಿರ್ಯಾದುದಾರರು:– ತಿರುಮಲಶೆಟ್ಟಿಹಳ್ಳಿ ಪೊಲೀಸರು, ಹೊಸಕೋಟೆ

ವಿರುದ್ಧ

ಆರೋಪಿ:– ಚಂದ್ರಶೇಖರ ಬಿನ್ ಮುನಿಶಾಮಪ್ಪ, 41 ವರ್ಷ
ವಾಸ: ಭುವನಹಳ್ಳಿ ಗ್ರಾಮ,
ಮಾಲೂರು ತಾಲ್ಲೂಕು.

**ಆಪಾದನೆ**

ಶ್ರೀಮತಿ ಚೈತ್ರ ವ. ಕುಲಕರ್ಣಿ, ಬಿ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 15.12.2021 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣಾ ಸರಹದ್ದು, ತಿರುಮಲಶೆಟ್ಟಿಹಳ್ಳಿ–ಸಮೇತನಹಳ್ಳಿ ಎನ್.ಎಚ್.648ರಸ್ತೆ, ಭವಾನಿ ಶಾಲೆಯ ಬಳಿಯಲ್ಲಿ ಆರೋಪಿಯಾದ ನೀವು ಕೆಎ–01–ಎಫ್–8762 ಬಿ.ಎಮ್.ಟಿ.ಸಿ. ಬಸ್‌ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾ.ಸಾ.1ರವರ ಕೆಎ–40–ಇಸಿ–503 ಹಿರೋ ಗ್ಲಾಮರ್ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆಸಿದ್ದರ ಪರಿಣಾಮ ಚಾ.ಸಾ.1ರವರ ಬಲಗಾಲಿಗೆ ಏಟು ಬಿದ್ದು, ಮೂಳೆ ಮುರಿದ ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು ಕಲಂ.338ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?
ಉತ್ತರ:

ಪ್ರಶ್ನೆ2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ:

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 13.10.2022 ರಂದು ಧೃಢೀಕರಿಸಿದ್ದೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**